632 ಶ್ರೀ ರುದ್ರೇಶಗೌಡ ವೈ.ಎನ್ (ಬೇಲೂರು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು, ಅರೇಹಳ್ಳಿ ಹೋಬಳಿ ಹೇಮಾವತಿ ನದಿಯಲ್ಲಿ ಮರಳು ತೆಗೆಯುತ್ತಿರುವುದು ನಿಜವೇ;

ಆ) ಯಾವ ಯಾವ ಹಳ್ಳಿಗಳಲ್ಲಿ ಮರಳನ್ನು ತೆಗೆಯಲು ಅನುಮತಿ ನೀಡಲಾಗಿದೆ;

ಇ) ಒಂದೇ ಹೊಳೆ (ನದಿ)ಯಲ್ಲಿ 2 ಕಿ.ಮೀ. ಅಂತರದಲ್ಲಿ 6 ಜಾಗಗಳಲ್ಲಿ ಹರಾಜು ಮಾಡಲಾಗಿದೆಯೇ;

ಈ) ಮರಳು ಸಾಗಾಣಿಕೆ ವಾಹನ ಓಡಾಟದಿಂದ ಅರೇಹಳ್ಳಿ ಹೋಬಳಿಯ ರಸ್ತೆಗಳ ಡಾಂಬರ್ ಕಿತ್ತು ಹೋಗಿ ರಸ್ತೆ ಗುಂಡಿ ಬಿದ್ದು ಸಂಪೂರ್ಣವಾಗಿ ಹಾಳಾಗಿರುವುದು ನಿಜವೇ?

ಶೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಹೌದು. 5 ಪ್ರದೇಶಗಳಲ್ಲಿ ಹರಾಜಿನ ಮೂಲಕ ಮರಳು ಗುತ್ತಿಗೆಗಳನ್ನು ಒಂದು ವರ್ಷದ ಅವಧಿಗೆ ನೀಡಿರುತ್ತದೆ.

ಆ) ಅರೇಹಳ್ಳಿ ಹೋಬಳಿಯ ನಾರ್ವೆ, ಗೊರವನಹಳ್ಳಿ, ತುಂಬುದೇವನಹಳ್ಳಿ ಮತ್ತು ಸುಲಗಳಲೆ ಗ್ರಾಮಗಳಲ್ಲಿ ಮರಳು ಗುತ್ತಿಗೆಗಳನ್ನು ಹರಾಜು ಮೂಲಕ ಮಂಜೂರು ಮಾಡಲಾಗಿದೆ.

ಇ) ಅರೇಹಳ್ಳಿ ಹೋಬಳಿ ಹೇಮಾವತಿ ನದಿ ಪಾತ್ರದಲ್ಲಿ ಮರಳು ಲಭ್ಯವಿರುವ 6 ಕಿ.ಮೀ. ವ್ಯಾಪ್ತಿಯಲ್ಲಿ ಒಟ್ಟು 5 ಪ್ರದೇಶಗಳಲ್ಲಿ ಹರಾಜು ಮಾಡಲಾಗಿದೆ.

ಈ) ಅರೇಹಳ್ಳಿ ಹೋಬಳಿಯ ಮುಖ್ಯ ರಸ್ತೆಗಳು ಡಾಂಬರು ರಸ್ತೆಗಳಾಗಿದ್ದು ಸದರಿ ರಸ್ತೆಗಳಲ್ಲಿ ಅಧಿಕ ಭಾರ ಹೊತ್ತ ಮರಳು, ಟಿಂಬರ್ ಸಾಗಾಣಿಕೆ ವಾಹನಗಳು ಮತ್ತು ಇತರೆ ವಾಹನಗಳು ಸಂಚರಿಸುತ್ತವೆ. ಈ ರಸ್ತೆಗಳು ಹಾಳಾಗಲು ಮರಳು ಸಾಗಾಣಿಕೆ ಮಾಡುವ ವಾಹನಗಳು ಸಹ ಸ್ವಲ್ಪ ಮಟ್ಟಿಗೆ ಕಾರಣ.